ಬೆಂಗಳೂರು ನಗರದಲ್ಲಿರುವ ಕೊಳವೆ ಬಾವಿಗಳ ಸಂಖ್ಯೆ

2696 (3204)ಶ್ರೀ ಕಟ್ಟಾಸುಬ್ಬಮಣ್ಯ ನಾಯ್ಡು (ಶಿವಾಜಿನಗರ): ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ಬೆಂಗಳೂರು ನಗರದಲ್ಲಿರುವ ಒಟ್ಟು ಕೊಳವೆ ಬಾವಿಗಳ ಸಂಖ್ಯೆ ಎಷ್ಟು?

2. ಕುಡಿಯುವ ನೀರಿನ ಬಗ್ಗೆ ಜಲ ಮಂಡಳಿಯು ಮುಂದಿನ ಕಾರ್ಯ ಯೋಜನೆ ಏನು?

3. ಆಯವ್ಯಯದಲ್ಲಿ ಜಲ ಮಂಡಳಿಗೆ ಮೀಸಲಿಟ್ಟಿರುವ ಹಣ ಎಷ್ಟು?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯ ಮಂತ್ರಿಯವರು) :

1. 6,888 ಕೊಳವೆ ಬಾವಿಗಳಿವೆ.

2. ಬೆಂಗಳೂರು ನಗರಕ್ಕೆ ದಿನಂಪ್ರತಿ 270 ದಶಲಕ್ಷ ಲೀಟರ್ ಹೆಚ್ಚುವರಿ ನೀರು ಒದಗಿಸಲು ಜಲ ಮಂಡಳಿಯು ಕಾವೇರಿ ನಾಲ್ಕನೇ ಯೋಜನೆಯ ಮೊದಲನೆಯ ಘಟ್ಟವನ್ನು ರೂ. 1072.00 ಕೋಟಿ ಅಂದಾಜು ವೆಚ್ಚದಲ್ಲಿ ತೆಗೆದುಕೊಂಡಿದೆ.

3. 2000-2001ನೇ ಸಾಲಿಗೆ ರೂ. 269. 10 ಕೋಟಿಗಳು.

ತುರವೇಕೆರೆ ತಾಲ್ಲೂಕ ದಂಡಿನ ಶಿವರ ಹೋಬಳಿಗೆ ಕೆ.ಇ.ಬಿ. ಉಪ ಕೇಂದ್ರ

697 (3378)ಶ್ರೀ ಎಂ.ಡಿ. ಲಕ್ಷ್ಮೀ ನಾರಾಯಣ (ತುರುವೇಕೆರೆ): ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುರುವೇಕೆರೆ ತಾಲ್ಲೂಕು ದಂಡಿನಶಿವರ ಹೋಬಳಿಗೆ ಕೆ.ಇ.ಬಿ. ಉಪಕೇಂದ್ರವನ್ನು ಎಂದಿನಿಂದ ಪ್ರಾರಂಭ ಮಾಡಲಾಗುವುದು;

ಆ) ಸದರಿ ಉಪಕೇಂದ್ರ ಪ್ರಾರಂಭ ಆಗುವವರೆಗೂ ವೋಲ್ಟೇಜ್ ಸಮಸ್ಯೆ ಬಗೆಹರಿಸಲು ಕೈಗೊಳ್ಳಲಿರುವ ಕ್ರಮಗಳೇನು?

ಶ್ರೀ ವೀರಕುಮಾರ್ ಪಾಟೀಲ್ (ಇಂಧನ ರಾಜ್ಯ ಸಚಿವರು) :

ಅ) ತುರುವೇಕೆರೆ ತಾಲ್ಲೂಕು ದಂಡಿನಶಿವರ ಹೋಬಳಿಯಲ್ಲಿ ವಿದ್ಯುತ್ ಉಪ ಕೇಂದ್ರವನ್ನು ಸ್ಥಾಪಿಸುವ ಬಗ್ಗೆ ಪ್ರಸ್ತುತ ಯಾವ ಪ್ರಸ್ತಾವನೆಯೂ ಇರುವುದಿಲ್ಲ.

ಆ) ತುರುವೇಕೆರೆ ತಾಲ್ಲೂಕು ದಂಡಿನಶಿವರ ಹೋಬಳಿಯ ಕೆಲವು ಪ್ರದೇಶಗಳಲ್ಲಿ ಇರುವ ವೋಲ್ಟೇಜ್ ಸಮಸ್ಯೆಯನ್ನು ಬಗೆಹರಿಸಲು ಕಲ್ಲೂರಿನಲ್ಲಿರುವ 110/11 ಕೆ.ವಿ. ವಿದ್ಯುತ್ ಉಪಕೇಂದ್ರದಿಂದ ಸಂಪಿಗೆ ವರೆಗೆ ಸುಮಾರು 2.65 ಕಿ.ಮೀ ಉದ್ದದ ಒಂದು 11 ಕೆ.ವಿ. ಎಕ್ಸ್‌ಪ್ರೆಸ್ ಲೈನನ್ನು ರೂ. 2.96 ಲಕ್ಷ ಅಂದಾಜು ವೆಚ್ಚದಲ್ಲಿ ನಿರ್ಮಾಣ ಮಾಡಲು ಕ್ರಮ ಜರುಗಿಸಲಾಗುತ್ತಿದೆ.